

ಡಾ.ವಿನೋದ ಛೆಬ್ಬಿ

ಆತ್ಮೀಯರ ಸಾವು ನಮ್ಮ ಸಾಧನೆಯ ಪರೀಕ್ಷೆಗಾಗಿ ಅಲ್ಲ, ಬದಲಾಗಿ ನಾವು ಸಾಧಿಸಿದುದರ ಇತಿಮಿತಿಯನ್ನು ಅರಿತು ವಿನಮ್ರರಾಗುವುದಕ್ಕಾಗಿ.

# 327: ಹೊಸ ದಾರಿ - 67

ಆತ್ಮೀಯರ ಸಾವಿನ ನಂತರ ಹೆಚ್ಚಿನ ದುಃಖಾರ್ತರಲ್ಲಿ ಮುಗಿಯದ ಮನೋವ್ಯಾಪಾರ ಗಿರಕಿ ಹೊಡೆಯುತ್ತ ಇರುತ್ತದೆ ಎಂದು ಹೇಳುತ್ತಿದ್ದೆ. ಇಂಥವರು ನನ್ನೊಡನೆ ಹಂಚಿಕೊಂಡದ್ದಕ್ಕೆ ಪ್ರತಿಯಾಗಿ ನನಗನಿಸಿದ್ದನ್ನು ಮುಂದುವರಿಸುತ್ತಿದ್ದೇನೆ. ಇದರಲ್ಲಿ ಅತಿಯಾಗಿ ಕಾಡುವಂಥದ್ದು ತಪ್ಪಿತಸ್ಥ ಭಾವ ಹಾಗೂ ಕಳೆದುಕೊಂಡ ವ್ಯಥೆ. ಇದರ ಬಗೆಗೆ ನೋಡೋಣ.

ಸಾಯುವವರಿಗೆ ನೆಮ್ಮದಿ ಕೊಡಲಾಗಲಿಲ್ಲ! ಇವನ ತಾಯಿ ಸಾಯುವುದಕ್ಕಿಂತ ಮುಂಚೆ ಹಾಸಿಗೆಹುಣ್ಣಿನಿಂದ ನರಳುತ್ತಿದ್ದಳು. ತೀರಿಕೊಂಡ ವಾರದ ನಂತರ ಇವನಿಗೊಂದು ಮಾಹಿತಿ ಸಿಕ್ಕಿತು: ಹಾಸಿಗೆ ಹುಣ್ಣಿನ ಬಾಧೆಯನ್ನು ಕಡಿಮೆಗೊಳಿಸಲು ವಾಟರ್ ಬೆಡ್ ಅಂತ ಸಿಗುತ್ತದೆ! ಆಗ ಪಟ್ಟ ಪರಿತಾಪ ಹೇಳತೀರದು. ಇಷ್ಟೊಂದು ಚಿಕ್ಕ ವಿಷಯ ಗಮನಕ್ಕೆ ಬರಲಿಲ್ಲ ಎಂದರೆ ತಾಯಿಯನ್ನು ಅಲಕ್ಷಿಸಿದೆ! ಇನ್ನೊಬ್ಬರು, ಬಚ್ಚಲು ತೊಳೆಯದಿದ್ದ ದಿನವೇ ಹಿರಿಯರು ಜಾರಿಬಿದ್ದು ಮೂಳೆ ಮುರಿದುಕೊಂಡು ಅಂತ್ಯಾವಸ್ಥೆಗೆ ಬಂದಿದ್ದಕ್ಕೆ ತನ್ನನ್ನೇ ಹೊಣೆ ಮಾಡಿಕೊಂಡಿದ್ದಾರೆ. ಹೀಗೆ, ಇಂಥಿಂಥದ್ದನ್ನು ಮಾಡಿದ್ದರೆ/ಮಾಡದಿದ್ದರೆ ನೋವು ನರಳಿಕೆ ತಡೆಯಬಹುದಿತ್ತು ಎಂದು ಈತನಕದ ಸರ್ವಸೇವೆಯನ್ನು ಮೂಲೆಗೊತ್ತಿ ವಿಷಾದಿಸುತ್ತೇವೆ. ಮತ್ತೊಬ್ಬರು ಪ್ರಯಾಣ ನಿರ್ಧರಿಸಲು ಒಂದುದಿನ ತಡಮಾಡಿದ್ದಕ್ಕೆ ಊರಿಗೆ ಟಿಕೆಟ್ ಸಿಗದೆ ಹಿರಿಯರ ಅಂತ್ಯದರ್ಶನದ ಭಾಗ್ಯದಿಂದ ವಂಚಿತರಾಗಿದ್ದಾರೆ. ಇಂಥ ಪ್ರಸಂಗಗಳಲ್ಲಿ ಹೀಗಾಗುವುದೆಂದು ಮುಂಚೆಯೇ ಗೊತ್ತಿದ್ದರೆ ತಕ್ಕ ಕ್ರಮವನ್ನೂ ಮುಂಚೆಯೇ ಕೈಗೊಳ್ಳಬಹುದಿತ್ತು ಎಂದು ಹಲುಬುತ್ತಿದ್ದಾರೆ. ಆದರೆ ನಾವು ಅತೀಂದ್ರಿಯ ಸಾಮರ್ಥ್ಯ ಸಾಧಿಸಿಲ್ಲ ಎನ್ನುವುದು ಗೊತ್ತಿದ್ದೂ ಸಲ್ಲದ ಹೊಣೆ ಹೊತ್ತುಕೊಳ್ಳುವುದನ್ನು ನೋಡಿದರೆ ಅದರ ಹಿಂದೆ ಸಾರ್ವತ್ರಿಕ ನಂಬಿಕೆ ಹರಿದಾಡುತ್ತಿರುವುದು ಗೊತ್ತಾಗುತ್ತದೆ: 'ಶಕ್ತಿಮೀರಿ ಪ್ರಯತ್ನಿಸಬೇಕು!' ನನಗೂ ಚಿಕ್ಕಂದಿನಲ್ಲಿ ಹೀಗೆ ಹೇಳಿಕೊಡಲಾಗಿತ್ತು. ಇಲ್ಲಿ 'ಶಕ್ತಿಮೀರಿ ಪ್ರಯತ್ನ' ಎಂದರೇನು? ನೀನು ಇಷ್ಟು ಮಾಡಿದ್ದನ್ನು/ ಸಾಧಿಸಿದ್ದನ್ನು ಕಡೆಗಣಿಸು! ಇದನ್ನು ತಿರುಗಿಸಿ ನೋಡಿದರೆ ಏನು ಕಾಣುತ್ತದೆ? 'ನಿನ್ನನ್ನು ನೀನು ಪ್ರೀತಿಸಬೇಡ, ನೀನು ಪ್ರೀತಿಗೆ ಅಯೋಗ್ಯ/ಳು!' ಇಂಥ ಆತ್ಮಹೀನತೆಯ ಭಾವವೇ ಹೆಚ್ಚಿನ ದುಃಖಗಳಿಗೆ ಕಾರಣ – ಅದಕ್ಕೇ ದುಃಖಾರ್ತರು ತಮ್ಮನ್ನೇ ತಾವು ಕಳೆದುಕೊಂಡಂತೆ ಕಾಣುತ್ತಾರೆ. ವಾಸ್ತವವಾಗಿ ಎಲ್ಲರೂ ಸಂದರ್ಭಾನುಸಾರ ತಮ್ಮ ಬುದ್ಧಿಗೆ ತಿಳಿದಷ್ಟು, ತಮ್ಮ ಕಲ್ಪನೆಗೆ ಎಟುಕಿದಷ್ಟು, ಹಾಗೂ ತಮ್ಮ ಕೈಲಾಗುವಷ್ಟು ಮಾಡಿಯೇಮಾಡುತ್ತೇವೆ. ಅವರ ಕಾರ್ಯಕ್ಷಮತೆಯನ್ನು ಫಲಶ್ರುತಿಯಿಂದ ಅಳೆಯುವುದಾಗಲೀ, ಇನ್ನೊಬ್ಬರಿಗೆ ಹೋಲಿಸಿ ನಿರ್ಣಯಿಸುವುದಾಗಲೀ ತಪ್ಪೇತಪ್ಪು. ಇನ್ನೊಂದು ಸತ್ಯವೇನೆಂದರೆ, ಶಕ್ತಿಮೀರಿ ಯತ್ನಿಸುವ ಭರದಲ್ಲಿ ಹುಲುಮಾನವತೆಯನ್ನು ಮರೆತು ಅತಿಮಾನವರಾಗಲು ಹವಣಿಸುತ್ತೇವೆ. ಸಾವಿನ ಸಂದರ್ಭಗಳು ನಮ್ಮ ಸಾಧನೆಯ ಪರೀಕ್ಷೆಗಾಗಿ ಅಲ್ಲ, ಬದಲಾಗಿ ನಾವು ಸಾಧಿಸಿದುದರ ಇತಿಮಿತಿಯನ್ನು ತಿಳಿಸಿಕೊಟ್ಟು ನಮ್ರತೆಯನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಬರುತ್ತವೆ ಎಂದೆನಿಸುತ್ತದೆ.

ಅಂತ್ಯಾವಸ್ಥೆಯಲ್ಲಿ ಸಹಾಯಸಂದೇಶ: ವಯಸ್ಸಾದವರು ನರಳುತ್ತಿರುವಾಗ ಸಹಾಯ ಬೇಕೇಬೇಕು. ಆದರೆ ಕೊನೆಕೊನೆಗೆ ಸ್ಮೃತಿ ತಪ್ಪಿರುವಾಗ ಸಹಾಯವು ಎಷ್ಟು ಸಹಾಯ ಮಾಡಬಲ್ಲುದು ಎಂದು ನೋಡೋಣ. ಆರೋಗ್ಯವಂತರು ಎಚ್ಚರವಿರುವಾಗ ನರಮಂಡಲದ ಒಂದು ವ್ಯವಸ್ಥೆಯು (**Reticular Activatory System**) ಶರೀರದ ಭಂಗಿಯನ್ನೂ, ಬಾಹ್ಯ ಸಂವೇದನೆಗಳನ್ನೂ (ಉದಾ. ಅಡ್ಡಡ್ಡ ಒರಗಿ ಟಿವಿ ವೀಕ್ಷಿಸುವಾಗ ಹೊರಗೆ ನಾಯಿ ಬೊಗಳುವುದು) ಮಂದಗತಿಯಲ್ಲಿ ಮೆದುಳಿಗೆ ಮುಟ್ಟಿಸುತ್ತ ಇರುತ್ತದೆ. ಬೇಡವಾದ ಈ ಸಂವೇದನೆಗಳನ್ನು ಅಲಕ್ಷಿಸಿ ಬೇಕಾದುದರ ಗಮನ ಕೊಡುತ್ತೇವೆ. ಈ ವ್ಯವಸ್ಥೆಯು ನಿದ್ರೆಯಲ್ಲಿ ಸ್ಥಗಿತವಾಗಿರುತ್ತದೆ. ಇದೇ ಕಾರಣಕ್ಕೆ ಎದ್ದಮೇಲೆಯೇ ರಾತ್ರಿಯೆಲ್ಲ ಕತ್ತುನೋವು ಇದ್ದದ್ದು ಗೊತ್ತಾಗುವುದು. ಅಂತ್ಯಾವಸ್ಥೆಯಲ್ಲಿ ಈ ವ್ಯವಸ್ಥೆಯು ಕಾಯಂ ಆಗಿ ಸ್ಥಗಿತಗೊಳ್ಳುವುದರಿಂದ ದೇಹದ ನೋವು ಪೀಡೆಗಳು ಅಷ್ಟಾಗಿ ಅರಿವಾಗುವುದಿಲ್ಲ. ಹಾಗಾಗಿ ಒಂದೇ ಸ್ಥಿತಿಯಲ್ಲಿ ದಿನಗಟ್ಟಲೇ ಮಲಗಿರಲು ಸಾಧ್ಯವಿದೆ. ಇದರರ್ಥವೇನು? ನಾವು ಅಯ್ಯೋ ಎಂದು ಮರುಕಪಡುವ ಮರಣಾವಸ್ಥೆಯ ಸ್ಥಿತಿಯು ನಾವು ಅಂದುಕೊಂಡಷ್ಟು ದಾರುಣವಾಗಿರುವುದಿಲ್ಲ. ಸಾವು ಹತ್ತಿರವಾದಾಗ (ಕಂಪ್ಯೂಟರ್ ನಿಲ್ಲಿಸುವ ಗುಂಡಿ ಒತ್ತಿದಾಗ ಆಗುವಂತೆ) ಒಂದೊಂದೇ ಅಂಗಗಳು ಕಾರ್ಯ ನಿಲ್ಲಿಸುತ್ತ ಹೋಗುತ್ತವೆ. ಮಾತೂ ನಿಲ್ಲಬಹುದು. ಕೊನೆಯ ಗಳಿಗೆಗಳಲ್ಲಿ ಇರುವುದು ಸ್ಪರ್ಶ ಮಾತ್ರ. ಹುಟ್ಟಿದಾಗ ಆಗುವಂತೆ ಸಾಯುವಾಗಲೂ ಸ್ಪರ್ಶವೇ ಸಂಪರ್ಕ ಮಾಧ್ಯಮವಾಗುತ್ತದೆ. ಹಾಗಾಗಿ ಅಂತ್ಯಾವಸ್ಥೆಯಲ್ಲಿ ಇರುವವರನ್ನು ಸ್ಪರ್ಶಿಸುವುದು, ನೇವರಿಸುವುದು, ಕೈಹಿಡಿದುಕೊಂಡು ಕೂಡುವುದು ಅವರ ಅಂತಃಕರಣವನ್ನು ಮುಟ್ಟಬಹುದು.

ಅಂತ್ಯಕಾಲದ ಸಂದೇಶ: ಅನೇಕ ವೃದ್ಧರಿಗೆ ಸಾವು ನಿಧಾನವಾಗಿ ಸಮೀಪಿಸುತ್ತಿದೆ ಎಂಬುದು ಅರಿವಿಗೆ ಬರುತ್ತದೆ. ಆಗವರು ತಮ್ಮ ಬಯಕೆಗಳನ್ನು ಪ್ರಕಟಪಡಿಸಿದರೆ ಪೂರೈಸುವುದು ಸುಲಭ. (ನಮ್ಮಪ್ಪ ಸಾವು ಸಮೀಪಿಸಿದೆ ಎಂದು ಪ್ರಕಟವಾಗಿ ಹೇಳಿ, ಎಲ್ಲ ಮಕ್ಕಳನ್ನೂ ನೋಡಬೇಕೆಂದ. ಅದಾಗಿ ಎರಡು ದಿನಕ್ಕೇ ತೀರಿಕೊಂಡ.) ಆದರೆ ಮಾತು ನಿಂತು ಕೈಸನ್ನೆ, ಬಾಯಿಸನ್ನೆ ಮಾಡುವುದನ್ನು ಕಂಡಾಗ? ಏನೋ ಹೇಳಬೇಕೆಂದಿದ್ದು ಹೇಳಲಾಗದೆ ಒದ್ದಾಡುತ್ತಿದ್ದಾರೆ ಎಂದೆನಿಸಿ ಸಂಕಟವಾಗುತ್ತದೆ. ತಮ್ಮ ಪತಿ ಸಾಯುವಾಗ ಏನೋ ಕೈಸನ್ನೆ ಮಾಡುತ್ತಿದ್ದರು, ಅದನ್ನು ಅರ್ಥಮಾಡಿಕೊಳ್ಳಲು ಆಗಲಿಲ್ಲ ಎಂದು ಒಬ್ಬರು ವ್ಯಥಿಸಿದ್ದಾರೆ. ವಿಷಯವೇನೆಂದರೆ, ಸಾಯುವವರ ಮೆದುಳಿನ ಕಾರ್ಯಾಚರಣೆ ಸ್ಥಗಿತವಾಗುತ್ತಿರುವುದರಿಂದ ಭಾಷೆಯಂಥ ಸೂಕ್ಷ್ಮ ಕೌಶಲ್ಯಗಳು ಕಾಣೆಯಾಗುತ್ತವೆ. ಆಗ ಅವರಾಡುವ ಮಾತುಗಳು ಅರ್ಥ ಕಳೆದುಕೊಂಡು ಕೇವಲ ಬಡಬಡಿಕೆಗಳಾಗಬಹುದು. ಆದರೆ ಮೂಲಭಾವಗಳು ಇನ್ನೂ ಜಾಗೃತವಾಗಿರುತ್ತವೆ. ಆದುದರಿಂದ ಅಂತ್ಯಾವಸ್ಥೆಯ ಮಾತುಗಳನ್ನು ಅಕ್ಷರಶಃ ಅರ್ಥೈಸಲು ನೋಡದೆ ಅದು ನಿಮಗೆ ಕೊಡುವ ಭಾವನೆಗಳನ್ನು ಅನುಭವಿಸಿದರೆ ಸಾಕು (ಉದಾ. ದುಃಖ ಒತ್ತರಿಸಿ ಬರುತ್ತಿದ್ದರೆ ಅಳುವುದು). ನೆನಪಿಡಿ: ಸಾಯುವವರು ಭಾಷೆಯನ್ನು ಮೀರಿ ಪಯಣಿಸಿರುತ್ತಾರೆ. ಅವರ ಯಾವುದೇ ಹಾವಭಾವಗಳ, ಸಂಜ್ಞೆಗಳ ಭಾವನಾತ್ಮಕ ಅರ್ಥ ಒಂದೇ: ಹೊರಡುತ್ತಿದ್ದೇನೆ, ಬೀಳ್ಕೊಡು!

ಮಹಿಳೆಯೊಬ್ಬರು ಬರೆದುಕೊಂಡಿದ್ದಾರೆ: ನೀವು ಹೇಳಿದ 'ಬಿತ್ತಿದಂತೆ ಬೆಳೆ' (ಕರ್ಮಫಲ) ಎನ್ನುವುದನ್ನು ನಾನು ನಂಬುವುದಿಲ್ಲ. ಯಾಕೆಂದರೆ ನನ್ನ ವೃದ್ಧ ಮಾವ ಅಲ್‌ಝೈಮರ್ ಕಾಯಿಲೆಯಿಂದ (**Alzheimer's disease:** ಜ್ಞಾಪಕ ಶಕ್ತಿ ಕುಂದುತ್ತ, ಕೊನೆಗೆ ಶರೀರವನ್ನೂ ತನ್ನತನವನ್ನೂ ಮರೆಯುವ ಕಾಯಿಲೆ) ನರಳುತ್ತಿದ್ದಾರೆ. ಅವರು ದೇವರಂಥವರು, ಯಾರನ್ನೂ ನೋಯಿಸಿದವರಲ್ಲ. ಅವರಿಗೇಕೆ ಈ ಗತಿ ಬಂತು ಎಂದಿದ್ದಾರೆ. ಹೌದಲ್ಲ, ಏಕೆ ಹೀಗೆ ಎಂದು ಯೋಚಿಸುವಾಗ ಹೊಳೆದದ್ದು ಇದು: ಅಲ್‌ಝೈಮರ್ ಇತರ ರೋಗಗಳಂತಲ್ಲದೆ ವಿಶಿಷ್ಟವಾಗಿದೆ. ಇದರಲ್ಲಿ ಬರಬರುತ್ತ ವ್ಯಾವಹಾರಿಕ ಜ್ಞಾಪಕ ಶಕ್ತಿಯೊಡನೆ ನಿಧಾನವಾಗಿ ಸ್ವಂತ ಶರೀರದ ಅರಿವು, ನಂತರ ಆತ್ಮಸಂವೇದನೆಯೂ ಇಲ್ಲವಾಗುತ್ತದೆ. ಶರೀರವೇ ನನ್ನದಲ್ಲ ಎನ್ನುವಾಗ ನೋವು ನರಳಿಕೆಯೂ ಇರುವುದಿಲ್ಲ. ಅಂದರೆ, ನೀವು ನೋಡುತ್ತಿರುವ ಅವರ ಸ್ಥಿತಿಯಲ್ಲಿ ನೋವು, ನರಳಿಕೆ, ತೊಳಲಾಟ ಇಲ್ಲ! (ಈ ಕಾಯಿಲೆಯಿದ್ದ ನನ್ನ ಸಂಬಂಧಿಯೊಬ್ಬರು ಕೈಯಲ್ಲೇನೋ ಹಿಡಿದುಕೊಂಡು ವಿಸ್ಮಯದಿಂದ ನೋಡುತ್ತಿದ್ದರು. ಅದು ಅವರ ಮಲವೆಂದು ತಿಳಿಸಿ ಹೇಳಿದರೂ ಅವರಿಗೆ ಅರ್ಥವಾಗಲಿಲ್ಲ.) ತಾತ್ವಿಕ ದೃಷ್ಟಿಯಿಂದ ನೋಡಿದರೆ ಯಾರಿಗೂ ಹಿಂಸಿಸದಿದ್ದ ಅವರು ಸ್ವತಃ ನರಳದೆ ಸಸ್ಯದಂತಿದ್ದು ನಿಮಗೆ ಸೇವಾಭಾಗ್ಯ ಕರುಣಿಸಿದ್ದಾರೆ. ಇಲ್ಲಿ ಬಿತ್ತಿದಂತೆ ಬೆಳೆಯುವ ಮಾತು ಅವರಿಗಷ್ಟೇ ಅಲ್ಲ, ನಿಮಗೂ ಅನ್ವಯವಾಗುತ್ತಿದೆ ಎನಿಸುತ್ತದೆ.

ನಿಮ್ಮಲ್ಲೇನಾದರೂ ಸ್ಫುರಿಸುತ್ತಿದ್ದರೆ ಹೊರಬರಲಿ.

ಸಂಪರ್ಕಕ್ಕೆ: 8494933888;
Email: vinod.chebbi@gmail.com